**ದಿನಾಂಕ: 03.01.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

**ಪಾಟೀಸವಾಲು: ಪ್ರತಿವಾದಿಪರ ವಕೀಲರಾದ ಶ್ರೀ ಪಿ.ಎಸ್. ಅವರಿಂದ–**

1. ವಾದಿ ರಾಜೇಶ್ ಚೌದರಿ ನನ್ನ ಸಹೋದರನಾಗಬೇಕು. ಅವರು ಬಟ್ಟೆ ಅಂಗಡಿ ಇಟ್ಟುಕೊಂಡಿರುತ್ತಾರೆ. ನಾನು ಸಹ ಬಟ್ಟೆ ಅಂಗಡಿ ಇಟ್ಟುಕೊಂಡಿದ್ದೇನೆ. ವಾದಿ ರಾಜೇಶ್ ಚೌದರಿ ಆರೋಗ್ಯವಾಗಿದ್ದಾರೆ ಎಂದರೆ ಸರಿ. ಸದರಿಯವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿಯಲು ತೊಂದರೆ ಇಲ್ಲ ಎಂದರೆ ಸರಿ. ಆದರೆ ಅವರು ಅಂಗಡಿಯಲ್ಲಿರಬೇಕಾಗುತ್ತದೆ ಎಂದು ಸಾಕ್ಷಿ ನುಡಿಯುತ್ತಾರೆ. ಸದರಿ ರಾಜೇಶ್ ಚೌದರಿ ಅವರ ವಿರುದ್ಧ ಬೇರೆ ಕ್ರಿಮಿನಲ್ ಪ್ರಕರಣ ಇವೆ ಎಂದರೆ ಸರಿ. ಸದರಿ ಪ್ರಕರಣ ಈ ದಿನ ನಿಗದಿಯಾಗಿದ್ದು, ಈ ದಿನ ಈ ನ್ಯಾಯಾಲಯಕ್ಕೆ ಬಂದಿದ್ದರು ಎಂದರೆ ಸರಿ.

2. ಸದರಿ ಪ್ರಕರಣ ಅಲ್ಲದೆ ವಾದಿ ವಿರುದ್ಧ ಬೇರೆ ನ್ಯಾಯಾಲಯಗಳಲ್ಲಿ ಬೇರೆ ಪ್ರಕರಣ ಇವೆ ಎಂದರೆ ಸರಿ. ಸದರಿ ಪ್ರಕರಣದಲ್ಲಿ ವಾದಿ ಬಂದು ಹೋಗಿ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿ ರಾಜೇಶ್ ಚೌದರಿ ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ಸತ್ಯಾಂಶ ಹೊರಗೆ ಬರುತ್ತದೆ ಎಂದು ನಾನು ಅವರ ಪರವಾಗಿ ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಗೌಡಿಕೆರೆ ಗ್ರಾಮದಲ್ಲಿ 30x40 ನಿವೇಶನಕ್ಕೆ 6–7 ಲಕ್ಷ ಬೆಲೆ ಇದೆ. ಪ್ರಸ್ತುತ ದಾವೆಯನ್ನು ಡಿಕ್ಲರೇಷನ್, ಪರ್ಮನೆಂಟ್ ಇಂಜನಕ್ಷ್‌ನ್ ಹಾಗೂ ಪೋಸೆಷನ್ ಗಾಗಿ ಸಲ್ಲಿಸಿರುತ್ತೇವೆ. ನಾವು ಪೋಸೆಷನ್ ಕೋರಿದ ಸಮಯ ದಾವಾ ಸ್ವತ್ತಿನ ಮಾರ್ಕೇಟ್ ವ್ಯಾಲ್ಯೂ ಮೇಲೆ ಕೋರ್ಟ್–ಫೀ ಕಟ್ಟಬೇಕು ಎಂದರೆ ಸರಿ. ಪ್ರಸ್ತುತ ದಾವೆಯನ್ನು ಎರಡು ನಿವೇಶನಗಳಿಗೆ ಪೋಸೆಷನ್ ಕೋರಿ ಸಲ್ಲಿಸಿರುತ್ತೇವೆ ಎಂದರೆ ಸರಿ. ಆದ್ದರಿಂದ ದಾವಾ ಸ್ವತ್ತಿಗೆ

14 ಲಕ್ಷ ವ್ಯಾಲ್ಯೂಯೇಷನ್ ಮಾಡಿ ಕೋರ್ಟ್-ಫೀ ಕಟ್ಟಬೇಕು ಎಂದರೆ ಸರಿ. ಆ ರೀತಿ ನಾವು ದಾವಾ ಮೌಲ್ಯ ಮಾಡಿ ಕೋರ್ಟ್-ಫೀ ಕಟ್ಟಿಲ್ಲ ಎಂದರೆ ಸರಿಯಲ್ಲ.

**4.** ಈ ಹಂತದಲ್ಲಿ ಸಾಕ್ಷಿದಾರರಿಗೆ ತಾನು ಹಾಜರುಪಡಿಸಿರುವ ವ್ಯಾಲ್ಯೂಯೇಷನ್ ಸ್ಲಿಪ್ ತೋರಿಸಿ, **2,00,700/-** ರೂ. ಮಾರ್ಕೇಟ್ ವ್ಯಾಲ್ಯೂ ಎಂದು ದಾವೆ ಸಲ್ಲಿಸಿರುತ್ತೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಕಾನೂನು ಪ್ರಕಾರ ನಾವು ಕೋರ್ಟ್ ಫೀ ಕಟ್ಟದೆ ಇರುವುದರಿಂದ ನಮ್ಮ ದಾವೆ ಊರ್ಜಿತವಲ್ಲ ಎಂದರೆ ಸರಿಯಲ್ಲ.

**ಮುಂದುವರಿದ ಪಾಟೀಸವಾಲು: ಪ್ರತಿವಾದಿ ಪರ ವಕೀಲರು ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಶಿರಿನ ಜಾವೀದ್ ಅನ್ಸಾರಿ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.